Ref.No. 243-2015

WW-1,

ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು 2006/07 ರಲ್ಲಿ ಸೇರಿಕೊಂಡಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು ಸೇರಿಕೊಳ್ಳುವ ಮೊದಲು ಬೇರೆ ಯಾವುದೇ ಸಂಸ್ಥೆಯಲ್ಲಿ ಕೆಲಸ ಮಾಡಿರುವುದಿಲ್ಲ. 2 ನೇ ಪಾರ್ಟಿ ಸಂಸ್ಥೆ ಯವರು ಕೆಲಸ ಖಾಲಿ ಇದೆ ಎಂದು ಬೋರ್ಡ್ ಹಾಕಿದ್ದರಿಂದ ನಾನು ಕೆಲಸಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೆಲಸ ಮಾಡುತ್ತಿರಬೇಕಾದರೆ 2013 ರಲ್ಲಿ ಯೂನಿಯನ್ ನ್ನು ರಚನೆ ಮಾಡಿರುತ್ತೇವೆ. ಸದರಿ ಯೂನಿಯನ್ ನ ಹೆಸರು ಎ ಐ ಟಿ ಯು ಸಿ ಆಗಿರುತ್ತದೆ. 2 ನೇ ಪಾರ್ಟಿ ಸಂಸ್ಥೆ ಗೆ ಸಂಬಂಧಿಸಿದಂತೆ ಯಾವುದೇ ಯೂನಿಯನ್ ಇರಲಿಲ್ಲ ಎಂದರೆ ಸರಿ . ಈ ಪ್ರಕರಣದ ವಿವಾದವನ್ನು ಜನರಲ್ ಯೂನಿಯನ್ ಮೂಲಕ ಎತ್ತಲಾಗಿರುತ್ತದೆ ಎಂದರೆ ಸರಿ . ನಾನು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸುಮಾರು 150 ಜನ ಕೆಲಸಗಾರರರು ಇದ್ದರು . ಆ ಕಾಲಕ್ಕೆ ಆಡಳಿತ ವರ್ಗ ಮತ್ತು ಗುತ್ತಿಗೆ ಕೆಲಸಗಾರರರು ಸುಮಾರು 150 ಜನ ಇದ್ದರು. ನಾನು 2006 ರಿಂದ 2013 ರವರೆಗೆ ನನ್ನ ಮತ್ತು ಆಡಳಿತ ವರ್ಗ ದವರ ಸಂಬಂಧ ಚೆನ್ನಾಗಿತ್ತು. ಸದರಿ ಅವಧಿಯಲ್ಲಿ ಕೆಲಸಗಾರರರಿಗೆ ನೋಟೀಸ್ ನೀಡುವುದಾಗಲೀ , ವಿಚಾರಣೆ ಮಾಡುವುದಾಗಲಿ ಮತ್ತು ಕೆಲಸದಿಂದ ತೆಗೆದುಹಾಕುವುದಾಗಲಿ ಆಗಿರುವುದಿಲ್ಲ ಎಂದರೆ ಸರಿ . ನಾನು ಮತ್ತು ಇತರ ಕಾರ್ಮಿಕರು ಸೇರಿ 2 ನೇ ಪಾರ್ಟಿ ಸಂಸ್ಥೆ ಯ ವರು ಇ ಎಸ್ ಐ, ಪಿ ಎಫ್ ಮತ್ತು ಸಂಬಳ ಸರಿಯಾಗಿ ನೀಡುತ್ತಿಲ್ಲವೆಂದು ಲೇಬರ್ ಆಫೀಸರ್ ಅವರ ಮುಂದೆ ವಿವಾದಗಳನ್ನು ಎತ್ತಿರುತ್ತೇವೆ ಎಂದರೆ ಸರಿ. ಸದರಿ ವಿವಾದಗಳಲ್ಲಿ 2 ನೇ ಪಾರ್ಟಿ ಸಂಸ್ಥೆ ಯವರು ನಮಗೆ ನಾಲ್ಕು ತಿಂಗಳ ಸಂಬಳವನ್ನು ನೀಡಬೇಕೆಂದಾಗಿರುತ್ತದೆ. ಯಾವ ಯಾವ ತಿಂಗಳ ಸಂಬಳ ನೀಡಬೇಕು ಎಂದು ಆಗಿರುತ್ತದೆ ಎಂದು ನನಗೆ ಈಗ ನೆನಪಿಲ್ಲ. ವೇತನ ಪಾವತಿ ಕಾಯಿದೆ ಅಡಿಯಲ್ಲಿ ವಿವಾದವನ್ನು ಎತ್ತಿದ್ದರಿಂದ ಸದರಿ ಆದೇಶವನ್ನು ಮಾಡಲಾಗಿರುತ್ತದೆ ಎಂದರೆ ಸರಿ . ಸದರಿ ವಿವಾದವಲ್ಲದೆ ಇನ್ನೂ ಬೇರೆ ಬೇರೆ ಇತರೆ ವಿವಾದಗಳನ್ನು 2 ನೇ ಪಾರ್ಟಿ ಸಂಸ್ಥೆ ವಿರುದ್ಧ ಎತ್ತಿರುತ್ತೇವೆ ಎಂದರೆ ಸರಿ . ಈ ಪ್ರಕರಣದಲ್ಲಿ ಜನವರಿ ಮತ್ತು ಫೆಬ್ರವರಿ ತಿಂಗಳ ಸಂಬಂಳವನ್ನು ನೀಡಬೇಕು ಎಂದು ವಿವಾದವನ್ನು ಎತ್ತಿರುತ್ತೇವೆ ಎಂದರೆ ಸರಿ . ಈ ನ್ಯಾಯಾಧೀಕರಣ ಕ್ಕೆ ಸರ್ಕಾರವು ಮಾಡಿದ ರೆಫರೆನ್ಸಿನಲ್ಲಿ ಜನವರಿ -2013 ರಿಂದ ಸಂಬಳವನ್ನು ನೀಡಬೇಕಾಗುತ್ತದೆ , ಎಲ್ಲಿಯವರೆಗೆ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ . ಈ ಪ್ರಕರಣ ದಲ್ಲಿ ನಾಲ್ಕು ತಿಂಗಳ ಸಂಬಳವನ್ನು ನೀಡಿಲ್ಲವೆಂದು ಲೇಬರ್ ಆಫೀಸರ್ ರವರ ಮುಂದೆ ವಿವಾದವನ್ನು ಎತ್ತಲಾಗಿರುತ್ತದೆ. ಸದರಿ ನಾಲ್ಕು ತಿಂಗಳ ಸಂಬಳದ ಬಗ್ಗೆ ವೇತನ ಪಾವತಿ ಕಾಯಿದೆ ಅಡಿಯಲ್ಲಿ ಆದೇಶವಾಗಿರುತ್ತದೆ ಎಂದರೆ ಸರಿ .

ಈ ಪ್ರಕರಣದಲ್ಲಿ ಕೇಳಿದಂತಹ ನಾಲ್ಕು ತಿಂಗಳ ಸಂಬಳವು ವೇತನ ಪಾವತಿ ಕಾಯಿದೆ ಅಡಿಯಲ್ಲಿ ಈಗಾಗಲೇ ಆದೇಶವಾಗಿರುವುದರಿಂದ ಈ ವಿವಾದವು ಊರ್ಜಿತವಾಗುವುದಿಲ್ಲ ಎಂದರೆ ಸರಿ . ನಾವು ಸಂಘವನ್ನು ರಚಿಸಿದ ನಂತರ ಬೇಡಿಕೆಗಳನ್ನು ಆಡಳಿತ ವರ್ಗದವರ ಮುಂದೆ ಇಟ್ಟಾಗ ಅವರು ನಮ್ಮ ಸಂಘವನ್ನು ಗುರುತಿಸಿರುವುದಿಲ್ಲ ಆದುದರಿಂದ ನಾವು ಸ್ಟ್ರೈಕ್ ಮಾಡಿರುತ್ತೇವೆ ಎಂದರೆ ಸರಿ . ನಾವು ಸ್ಟ್ರೈಕ್ ಮಾಡಿದಾಗ ಆಡಳಿತ ವರ್ಗದವರು ನ್ಯಾಯಾಲಕ್ಕೆ ಹೋಗಿ ನಮ್ಮ ವಿರುದ್ದ ತಡೆಯಾಜ್ಞೆಯನ್ನು ತಂದಿರುತ್ತಾರೆ ಎಂದರೆ ಸರಿ . ನಾವು ಸ್ಟ್ರೈಕ್ ಮಾಡಿದ 14 ದಿನಗಳ ಮೊದಲು ಆಡಳಿತ ವರ್ಗ ಕ್ಕೆ ನೋಟೀಸ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ ನೋಟೀಸ್ ನ್ನು ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಿರಬಹುದು. ನಾವು ಸ್ಟ್ರೈಕ್ ಮಾಡುವ ಕಾಲಕ್ಕೆ ನಮ್ಮ ಮತ್ತು 2 ನೇ ಪಾರ್ಟಿ ಯವರ ನಡುವೆ ವಿವಾದಗಳು ಲೇಬರ್ ಆಪೀಸರ್ ಮುಂದೆ ಬಾಕಿ ಇತ್ತು ಎಂದರೆ ಸರಿ . ನಾವು ಸ್ಟ್ರೈಕ್ ಮಾಡುವ ಮೊದಲು ನೋಟೀಸ್ ನ್ನು ನೀಡದೇ ಇದ್ದುದರಿಂದ ಹಾಗೂ ಸಂಧಾನ ಪ್ರಕ್ರಿಯೆಗಳು ಬಾಕಿ ಇದ್ದುದರಿಂದ ನಾವು ಮಾಡಿದ ಸ್ಟ್ರೈಕ್ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ . ನಾವು ಸ್ಟ್ರೈಕ್ ಮಾಡಿದ್ದರಿಂದ ಕೆಲಸಕ್ಕೆ ಹೋಗಿರುವುದಿಲ್ಲ ಅದನ್ನೇ ಲಾಕ್ ಔಟ್ ಎಂದು ಹೇಳಿ 2 ನೇ ಪಾರ್ಟಿ ಸಂಸ್ಥೆಯವರ ವಿರುದ್ದ ವಿವಾದವನ್ನು ಎತ್ತಿರುತ್ತೇವೆ ಎಂದರೆ ಸರಿಯಲ್ಲ . ನಾವು ಕಾನೂನು ಬಾಹಿರ ಮುಷ್ಕರ ಮಾಡಿದ್ದರಿಂದ 2 ನೇ ಪಾರ್ಟಿ ಸಂಸ್ಥೆ ಯವರು ಲಾಕ್ ಔಟ್ ಮಾಡಿದರೂ ಅದೂ ಕಾನೂನುಬದ್ದವಾಗಿರುತ್ತದೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ನಾವು ಕೆಲಸಕ್ಕೆ ಹೋಗಿರುತ್ತಾರೆ ಆದರೆ 2 ನೇ ಪಾರ್ಟಿ ಸಂಸ್ಥೆ ಯವರು ಲಾಕ್ ಔಟ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಈ ಪ್ರಕರಣ ವನ್ನು ಯೂನಿಯನ್ ಮುಖಾಂತರ ಎತ್ತದೆ ಕೆಲವೊಂದು ನಾವೇ ಕೆಲವೊಂದು ಕಾರ್ಮಿಕರು ಈ ವಿವಾದವನ್ನು ಎತ್ತಿರುತ್ತೇವೆ ಎಂದರೆ ಸರಿಯಲ್ಲ .

ನಾವು ಜನವರಿ –2013 ರಲ್ಲಿ ಕೆಲಸ ಮಾಡಿರುವುದಕ್ಕೆ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇವೆ . ನಿ ಡಬ್ಲ್ಯೂ- 4 ರಲ್ಲಿ 41 ಕಾರ್ಮಿಕರಿಗೆ ಸಂಬಂಧಿಸಿದ ದಾಖಲೆ ಯಾಗಿರುತ್ತದೆ ಎಂದರೆ ಸರಿ . ನಿ ಡಬ್ಲ್ಯೂ- 4 ದಿನಾಂಕ 24.03.2014 ರ ಒಂದು ದಿನದ ದಾಖಲೆಯಾಗಿರುತ್ತದೆ ಎಂದರೆ ಸರಿ. ನಿ ಡಬ್ಲ್ಯೂ- 4 ಟೈಂ ಇನ್ – ಟೈಂ ಔಟ್ ರಿಜಿಸ್ಟರ್ ಆಗಿರುತ್ತದೆ ಅಟೆಂಡೆನ್ಸ್ ರಿಜಿಸ್ಟರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಾವು ಕೆಲಸ ಮಾಡಿದ ಬಗ್ಗೆ ನಿ ಡಬ್ಲ್ಯೂ- 4 ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ ಡಬ್ಲ್ಯೂ- 4 ಕ್ಕೆ ಕೆಲವು ಕೆಲಸಗಾರರರು ಸಹಿ ಹಾಕಿರುತ್ತಾರೆ ಇನ್ನೂ ಕೆಲವರು ಹಾಕಿರುವುದಿಲ್ಲ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯವರು ಪೆಬ್ರವರಿ 2013 ರಲ್ಲಿ ಲಾಕ್ ಔಟ್ ಮಾಡಿರುತ್ತಾರೆ, ನಿರ್ದಿಷ್ಟವಾದ ದಿನಾಂಕ ನೆನಪಿಲ್ಲ. ಜನವರಿ 2013 ರಲ್ಲಿ ಲಾಕ್ ಔಟ್ ಆಗಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ತಿಂಗಳಿಗೂ ಕೂಡ 2 ನೇ ಪಾರ್ಟಿ ಸಂಸ್ಥೆಯವರು ಸಂಬಳವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯಲ್ಲಿ ಎಷ್ಟು ಜನ Land loosers ಇದ್ದಾರೆ ಎಂದು ನನಗೆ ಗೊತ್ತಿಲ್ಲ.

2 ನೇ ಪಾರ್ಟಿ ಸಂಸ್ಥೆ ಯವರು ನಮ್ಮನ್ನು ಇ ಎಸ್ ಐ ಮತ್ತು  ಪಿ ಎಫ್ ಅಡಿಯಲ್ಲಿ ಕವರ್ ಮಾಡಿದ್ದರು ಎಂದರೆ ಸರಿ . ಸಾಕ್ಷಿಯು ಮುಂದುವರೆದು ನಂತರ ನಿಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ . ಫೆಬ್ರವರಿ 2013 ರಿಂದ ನಿಲ್ಲಿಸಿರುತ್ತಾರೆ.

2 ನೇ ಪಾರ್ಟಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ  ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.